**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ</u>**

ಸೆಷನ್ಸ್ ಕೇಸ್ ನಂಃ 3/2021 ಪಿ.ಡಬ್ಲ್ಯೂಃ 13

ಸಿ.ಡಬ್ಲ್ಯೂಃ 32

| | |
|---|---|
| ಸಾಕ್ಷಿದಾರರ ಹೆಸರು | ಸುಬ್ಬಣ್ಣ |
| ತಂದೆಯ ಹೆಸರು | ಪಂಜು |
| ವಯಸ್ಸು | 62 ವರ್ಷ |
| ಉದ್ಯೋಗ | ನಿವೃತ್ತ ಪಿ.ಎಸ್.ಐ |
| ವಿಳಾಸ | ಕುಂದಾಪುರ |

ದಿನಾಂಕಃ 10-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

1) ನಾನು ದಿನಾಂಕ 01-06-2019 ರಿಂದ 10-07-2020 ರವರೆಗೆ ಪಡುಬಿದ್ರೆ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಸೇವೆ ಸಲ್ಲಿಸಿದ್ದೇನೆ.

2) ತಾರೀಕು 22-05-2020 ರಂದು ಬೆಳಿಗ್ಗೆ 10.00 ಗಂಟೆಗೆ ನಾನು ಠಾಣೆಯಲ್ಲಿದ್ದಾಗ 2 ನೇ ಆರೋಪಿ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು, ಅದನ್ನು ಠಾಣಾ ಗುನ್ನೆ ನಂಬ್ರ 33/2020 ಕ್ಕೆ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿದ್ದೆ. ಆದಿನ ನಾನು ಪಡೆದಿದ್ದ ದೂರನ್ನು ಈಗ ನೋಡಿ ಅದನ್ನು **ನಿಶಾನೆ ಪಿ-26** ಎಂದು, ಅದರಲ್ಲಿರುವ ನನ್ನ ಹಿಂಬರಹ ಮತ್ತು ಸಹಿಯನ್ನು **ನಿಶಾನೆ ಪಿ-26(ಎ)** ಎಂದು ಗುರುತಿಸಿದ್ದೇನೆ. ಅದರಲ್ಲಿಯ 2 ನೇ ಆರೋಪಿಯ ಸಹಿಯನ್ನು ನಿಶಾನೆ ಪಿ-26(ಬಿ) ಎಂದು ಗುರುತಿಸಿದ್ದೇನೆ. ಸದರಿ ಆಧಾರದ ಮೇಲೆ ದಾಖಲಿಸಿದ ಪ್ರಥಮ ವರ್ತಮಾನ ವರದಿಯನ್ನು **ನಿಶಾನೆ ಪಿ-27** ಎಂದು ಗುರುತಿಸಿದ್ದೇನೆ.

3) ನಂತರ ಮೇಲಾಧಿಕಾರಿಗಳ ಸೂಚನೆಯಂತೆ ತನಿಖೆಯನ್ನು ಮುಂದುವರೆಸಿ, ನಿಪಿ-10 ರ ಜಾಗೆಗೆ, 2 ನೇ ಆರೋಪಿ ತೋರಿಸಿದಂತೆ ಚಾಸಾ-9 ಮತ್ತು 10 ಇವರ ಸಮಕ್ಷಮ, ನಿಪಿ-10 ರ ಪಂಚನಾಮೆ ಬರೆದು, ನಿಪಿ-11 ರ

ಫೋಟೋಗಳನ್ನು ತೆಗೆಯಲಾಗಿತ್ತು, ಆ ಸಮಯದಲ್ಲಿ ನಿಪಿ-12 ರ ನಕಾಶೆಯನ್ನು ಸಹ ಬರೆದಿದ್ದೆ. ಅದರಲ್ಲಿರುವ ನನ್ನ ಸಹಿ ನಿಶಾನೆ ಪಿ-12(ಬಿ) ಎಂದು ಗುರುತಿಸಿದ್ದೇನೆ. ನಿಪಿ-10 ರ ಜಾಗೆಯಲ್ಲಿ ನಿಪಿ-11 ರಲ್ಲಿಯ ಸ್ಕೂಟರ್ ಇತ್ತು, ಆ ಸ್ಕೂಟರ್ ಗೆ ಬಲಭಾಗದಲ್ಲಿ ಜಖಂ ಆಗಿತ್ತು. ಅದನ್ನು ಅಲ್ಲಿಯೇ ಜಪ್ತು ಮಾಡಿದ್ದೆ. ನಂತರ ಠಾಣೆಗೆ ಬಂದು ಸ್ವಾಧೀನಪಡಿಸಿದ್ದ ವಾಹನಕ್ಕಾಗಿ ಮು.ಮಾ.ವರದಿ ಬರೆದಿದ್ದೆ. ಆ ವಾಹನದ ತಪಾಸಣೆಗಾಗಿ ಸಾರಿಗೆ ಅಧಿಕಾರಿಗಳಿಗೆ ಕೋರಿದ್ದೆ. ಅದೇ ದಿನ ಮೃತನ ಶವ ತನಿಖೆಗಾಗಿ ಚಾಸಾ-31 ಇವರಿಗೆ ಸೂಚಿಸಿದ್ದೆ.

4) ತಾರೀಕು 23-05-2020 ರಂದು ಚಾಸಾ-1 ಇವರ ಹೇಳಿಕೆಯನ್ನು ಪಡೆದಿದ್ದೆ. ನಂತರ ಚಾಸಾ-3 ಇವರನ್ನು ವಿಚಾರಿಸಿದ್ದೆ. ಅವರ ಹೇಳಿಕೆಯಿಂದ ತನಿಖೆಯಲ್ಲಿ ಹೆಚ್ಚಿನ ಗುನ್ಹೆಗಳು ಆಗಿರುವುದು ಕಂಡುಬರುತ್ತಿದ್ದು, ಅದರ ತನಿಖೆಯ ಬಗ್ಗೆ ನ್ಯಾಯಾಲಯಕ್ಕೆ ಕೋರಿಕೆ ಸಲ್ಲಿಸಿದ್ದೆ. ಅದೇ ದಿನ ಆರೋಪಿತರ ಪತ್ತೆಯ ಬಗ್ಗೆ ಚಾಸಾ-30 ಮತ್ತು ಸಿಬ್ಬಂದಿಗಳನ್ನು ನೇಮಿಸಿದ್ದೆ. ಅದೇ ದಿನ ಚಾಸಾ-30 ಮತ್ತು ಸಿಬ್ಬಂದಿಗಳು 1 ಮತ್ತು 2 ನೇ ಆರೋಪಿತರನ್ನು ಸಂಜೆ 3.30 ಗಂಟೆಗೆ ಅವರ ಮನೆಯಲ್ಲಿ ವಶಕ್ಕೆ ಪಡೆದು, ನನ್ನ ಮುಂದೆ ವರದಿಯೊಂದಿಗೆ 4.00 ಗಂಟೆಗೆ ಹಾಜರುಪಡಿಸಿದ್ದರು. ಅವರನ್ನು ವಿಚಾರಣೆ ಮಾಡಿ, ಹೇಳಿಕೆ ಪಡೆದು, ದಸ್ತಗಿರಿ ಕ್ರಮ ಜರುಗಿಸಿದ್ದೆ. ಅದಕ್ಕಾಗಿ ನಿಪಿ-8 ರ ಪಂಚನಾಮೆ ಬರೆದಿದ್ದೆ. ಆಗ ಆರೋಪಿತರ ಬಳಿಯಲ್ಲಿ ಇದ್ದ ನಿಪಿ-9 ರ ಮೊಬೈಲ್ ಗಳನ್ನು ಜಪ್ತು ಮಾಡಿದ್ದೆ. ನಿಪಿ-8 ರಲ್ಲಿರುವ ನನ್ನ ಸಹಿ ನಿಪಿ-8(ಸಿ) ಎಂದು ಗುರುತಿಸಿದೆ. ಆದಿನ ರಾತ್ರಿ 1 ನೇ ಆರೋಪಿಯನ್ನು ಮಹಿಳಾ ನಿಲಯದಲ್ಲಿ ಇರಿಸಲು ಕೋರಿದ್ದೆ. ಅದೇ ದಿನ ರಾತ್ರಿ ಶವ ತನಿಖೆ ಮತ್ತು ಮರಣೋತ್ತರ ಪರೀಕ್ಷೆಯ ನಂತರ ಮೃತನ ಶವವನ್ನು ಹೆಜಮಾಡಿಯ ಕನ್ನಂಗಾರು ಜುಮ್ಮಾ ಮಸೀದಿಯ ಬಳಿ 2 ನೇ ಆರೋಪಿಯಿಂದ ದಫನ್ ಮಾಡಿಸಲಾಯಿತು. ನಂತರ ಆತನನ್ನು ವಿಚಾರಿಸಿ ಹೇಳಿಕೆ ಪಡೆದಿದ್ದೆ.

5) ತಾರೀಕು 24-05-2020 ರಂದು ವೈದ್ಯಕೀಯ ತಪಾಸಣೆಯ ನಂತರ 2 ನೇ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಕೋರಿದ್ದೆ. ನಂತರ 1 ನೇ ಆರೋಪಿಯನ್ನು ವಿಚಾರಣೆ ಮಾಡಿ, ಹೇಳಿಕೆಯನ್ನು ಪಡೆದಿದ್ದೆ. ಅದರಂತೆ 1 ನೇ

ಆರೋಪಿ ಕೊಟ್ಟ ಹೇಳಿಕೆಯ ಭಾಗವನ್ನು ಈಗ ನೋಡಿ ಅದನ್ನು **ನಿಶಾನೆ ಪಿ-28** ಎಂದು ಗುರುತಿಸಿದೆ. ಅದೇ ದಿನ ಚಾಸಾ-16 ಮತ್ತು 17 ಇವರನ್ನು ಠಾಣೆಗೆ ಕರೆಯಿಸಿಕೊಂಡು, ಚಾಸಾ-16 ಮತ್ತು 17 ಇವರೊಂದಿಗೆ 1 ನೇ ಆರೋಪಿಯೊಂದಿಗೆ ಅವರ ವಾಸದ ಮನೆಗೆ ಭೇಟಿ ಮಾಡಿ, ಅಲ್ಲಿ ಆರೋಪಿ ತೋರಿಸಿದ ಕೋಣೆಯಲ್ಲಿ ಮೃತನನ್ನು ನೂಕಿದಾಗ, ಗೋಡೆಗೆ ಬಿದ್ದ ಜಾಗ ಎಂದು ತೋರಿಸಿದ್ದು, ಅದಕ್ಕಾಗಿ ಅಲ್ಲಿಯೇ ಪಂಚನಾಮೆಯನ್ನು ಬರೆದಿದ್ದೆ. ಸದರಿ ಪಂಚನಾಮೆಯನ್ನು ಈಗ ನೋಡಿ ಅದನ್ನು **ನಿಶಾನೆ ಪಿ-29** ಎಂದು, ಸಹಿಯನ್ನು ನಿಪಿ-29(ಎ) ಎಂದು ಗುರುತಿಸಿದ್ದೇನೆ. ಆಗ ತೆಗೆದಿದ್ದ ಫೋಟೋವನ್ನು ಈಗ ನೋಡಿ ಅದನ್ನು **ನಿಶಾನೆ ಪಿ-30** ಎಂದು ಗುರುತಿಸಿದೆ. ನಂತರ ಮೃತನನ್ನು ತೋಡಿಯಲ್ಲಿ ಹಾಕಿದ್ದ ಜಾಗೆಯನ್ನು ತೋರಿಸುವುದಾಗಿ ಹೇಳಿದ್ದು, ಅದಕ್ಕಾಗಿ ಚಾಸಾ-16 ಮತ್ತು 17 ಇವರೊಂದಿಗೆ ಹೋಗಿ ನೋಡಿದಾಗ, ಬರೆದ ಪಂಚನಾಮೆಯನ್ನು ಈಗ ನೋಡಿ ಅದನ್ನು **ನಿಶಾನೆ ಪಿ-31** ಎಂದು, ಸಹಿಯನ್ನು **ನಿಶಾನೆ ಪಿ-31(ಎ)** ಗುರುತಿಸಿದ್ದೇನೆ. ಆಗ ಅಲ್ಲಿ ಫೋಟೋವನ್ನು ತೆಗೆದಿದ್ದು, ಸದರಿ ಫೋಟೋವನ್ನು ಈಗ ನೋಡಿ ಅದನ್ನು **ನಿಶಾನೆ ಪಿ-32** ಎಂದು ಗುರುತಿಸಿದ್ದೇನೆ. ಆಗ ಅಲ್ಲಿ ಸ್ಕೂಟರ್ ಇರಲಿಲ್ಲ. ಆರೋಪಿಯೊಂದಿಗೆ ಠಾಣೆಗೆ ಬಂದು, ಅಲ್ಲಿ ಇದ್ದ ಸ್ಕೂಟರ್ ನ್ನು ಆರೋಪಿತೆಯು ನೋಡಿ ಗುರುತಿಸಿದ್ದು, ಅದಕ್ಕಾಗಿ ಚಾಸಾ-16 ಮತ್ತು 17 ಇವರ ಸಮಕ್ಷಮ ಪಂಚನಾಮೆಯನ್ನು ಬರೆದಿದ್ದು, ಸದರಿ ಪಂಚನಾಮೆಯನ್ನು ಈಗ ನೋಡಿ ಅದನ್ನು **ನಿಶಾನೆ ಪಿ-33** ಎಂದು ಗುರುತಿಸಿದ್ದೇನೆ. ಆಗ ತೆಗೆದ ಫೋಟೋವನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದೆ.

6) ಘಟನಾ ಸಮಯ ವಿದ್ಯುತ್ ಸಂಪರ್ಕ ಇತ್ತಾ ಎಂಬ ಬಗ್ಗೆ ಮಾಹಿತಿ ನೀಡುವಂತೆ ಚಾಸಾ-23 ಇವರಿಗೆ ಕೋರಿದ್ದೆ. ಕೃತ್ಯ ನಡೆದ ಸ್ಥಳ ಮತ್ತು ಮೃತನನ್ನು ತೋಡಿಗೆ ದೂಡಿದ ಸ್ಥಳ ಯಾರಿಗೆ ಸೇರಿದೆ ಎಂಬ ಬಗ್ಗೆ ಚಾಸಾ-25 ಇವರಿಗೆ ಕೋರಿದ್ದೆ. ವಶಪಡಿಸಿಕೊಂಡಿದ್ದ ವಾಹನದ ಬಿ ವರದಿಗಾಗಿ ಆರ್.ಟಿ.ಓ ಇವರಿಗೆ ಕೋರಿದ್ದೆ. ಕೃತ್ಯ ನಡೆದ ಸ್ಥಳದ ನಕಾಶೆ ತಯಾರಿಸುವಂತೆ ಚಾಸಾ- 24 ಇವರಿಗೆ ಕೋರಿದ್ದೆ. ನಂತರ 1 ನೇ ಆರೋಪಿಯನ್ನು ವೈದ್ಯಕೀಯ ಪರೀಕ್ಷೆ ಮಾಡಿಸಿ ನ್ಯಾಯಾಂಗ ಬಂಧನಕ್ಕೆ ಕೋರಿದ್ದೆ.

7) ತಾರೀಕು 26-05-2020 ರಂದು ಚಾಸಾ-2,5 ರಿಂದ 8, ಇವರ ಹೇಳಿಕೆಯನ್ನು ದಾಖಲಿಸಿದ್ದೆ. ದಿನಾಂಕ 29-05-2020 ರಂದು ಘಟನಾ ಸ್ಥಳದ ಮನೆಯ ಮಾಲೀಕರಾದ ಚಾಸಾ-18 ಇವರನ್ನು ವಿಚಾರಿಸಿ, ಹೇಳಿಕೆ ಪಡೆದಿದ್ದೆ. ತಕ್ಷೀರು ಸ್ಥಳಗಳಲ್ಲಿ ಯಾವುದೇ ವಿದ್ಯುತ್ ವ್ಯತ್ಯಯ ಆಗಿಲ್ಲ ಎಂದು ಚಾಸಾ-23 ಇವರಿಂದ ನಿಪಿ-18 ರ ವರದಿ ಪಡೆದಿದ್ದೆ.

8) ದಿನಾಂಕ 07-06-2020 ರಂದು ನಿಪಿ-19 ಮತ್ತು ನಿಪಿ-20 ರ ವರದಿಗಳನ್ನು ಪಡೆದಿದ್ದೆ. ದಿನಾಂಕ 13-06-2020 ರಂದು ಮೃತನ ಮರಣೋತ್ತರ ಪರೀಕ್ಷಾ ವರದಿ ನಿಪಿ-15 ನ್ನು ಪಡೆದಿದ್ದೆ. ದಿನಾಂಕ 15-06-2020 ರಂದು ಮೃತನ ನಿಶಾನೆ ಪಿ-15 ರ ಸಮಯದಲ್ಲಿ ತೆಗೆದಿದ್ದ ಜೈವಿಕ ಮಾದರಿಗಳನ್ನು ಆರ್.ಎಫ್ ಎಸ್ ಎಲ್ ಮಂಗಳೂರಿಗೆ ತಪಾಸಣೆಗಾಗಿ ಕಳುಹಿಸಿದ್ದೆ. ಅದೇ ದಿನ ನಿಶಾನೆ ಪಿ-6 ರ ಹೇಳಿಕೆಗಾಗಿ ಕೋರಿದ್ದೆ. ಅದೇ ದಿನ ಚಾಸಾ-24 ಇವರಿಂದ ನಿಪಿ-24 ಮತ್ತು 25 ರ ನಕಾಶೆಗಳನ್ನು ಸ್ವೀಕರಿಸಿದ್ದೆ.

9) ತಾರೀಕು 19-06-2020 ರಂದು ಚಾಸಾ-3 ಈತನ ಹೇಳಿಕೆಯನ್ನು ಚಾಸಾ-4 ಇವರ ಸಹಾಯದಿಂದ ನಿಪಿ-6 ರ ಹೇಳಿಕೆಯನ್ನು ಪಡೆದಿದ್ದೆ. ತಾರೀಕು 10-07-2020 ರಂದು ನಿಪಿ-16 ರ ವರದಿ ಪಡೆದಿದ್ದೆ. ತಾರೀಕು 07-06-2020 ರಂದು ಮೊಬೈಲ್ ಕರೆಗಳ ವಿವರಗಳನ್ನು ಕೋರಿದ್ದೆ. ಅವುಗಳನ್ನು ಅಧೀಕ್ಷಕರ ಮೂಲಕ ಸರ್ವಿಸ್ ಪ್ರೋವೈಡರ್ ಮೂಲಕ ವಿವರಗಳನ್ನು ಪಡೆದಿದ್ದೆ. ಸದರಿ ದಾಖಲೆಯನ್ನು ಈಗ ನೋಡಿ ಅದನ್ನು **ನಿಶಾನೆ ಪಿ-34** ಎಂದು ಗುರುತಿಸಿದ್ದೇನೆ. ಈ ದಾಖಲೆಯಿಂದ ಘಟನೆ ನಡೆದ ದಿನದಂದು ಆರೋಪಿತರು ಬೇರೆ ಬೇರೆ ಜಾಗೆಗಳಿಂದ ಶವ ಸಾಗಣೆ ಮತ್ತು ವಿಲೇಗಾಗಿ ಇದ್ದ ಕರೆಯ ಜಾಗೆಯ ವಿವರಗಳು ಕಂಡುಬರುತ್ತದೆ. ನಂತರ ತನಿಖೆ ಪೂರೈಸಿ, ಎಫ್ ಎಸ್ ಎಲ್ ವರದಿಯನ್ನು ಮತ್ತು ಸಾವಿನ ಅಂತಿಮ ಅಭಿಪ್ರಾಯದ ಬಗ್ಗೆ ಅವಕಾಶವನ್ನು ಮುಕ್ತವಾಗಿ ಇಟ್ಟುಕೊಂಡು ಆರೋಪಿತರ ಮೇಲೆ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೆ. ಈದಿನ ನ್ಯಾಯಾಲಯದಲ್ಲಿರುವ ಅರೋಪಿತರನ್ನು ತನಿಖೆಯ ಸಮಯದಲ್ಲಿ ಮಾಡಿದ ದಸ್ತಗಿರಿಗಾಗಿ ಗುರುತಿಸಿದ್ದೇನೆ.

10) ಚಾಸಾ-1 ನನ್ನ ಸಮಕ್ಷಮ ನಿಪಿ-3 ರಂತೆ , ಚಾಸಾ-2, ನಿಪಿ-4 ರಂತೆ, ಚಾಸಾ-3, ನಿಪಿ-5 ರಂತೆ, ಚಾಸಾ-7, ನಿಪಿ-7 ರಂತೆ, ಚಾಸಾ-8, ನಿಪಿ-29 ರಂತೆ ನನ್ನ ಮುಂದೆ ಹೇಳಿಕೆ ನೀಡಿದ್ದರು.

**ಪಾಟೀಸವಾಲು: ಶ್ರೀ ಪಿ.ಪಿ.ಜೆ ವಕೀಲರಿಂದ ಆರೋಪಿತರ ಪರವಾಗಿ**

1) ಚಾಸಾ-1 ಇವರ ಹೇಳಿಕೆಯ ಮೇಲೆ ಯಾವುದೇ ಹೊಸ ವರ್ತಮಾನ ದಾಖಲಿಸಿಲ್ಲ. ಚಾಸಾ-1 ಮತ್ತು 3 ನನ್ನ ಮುಂದೆ ಯಾವುದೇ ಹೇಳಿಕೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ-2, 3, 5, 6, 7, 8, ಮತ್ತು ಚಾಸಾ- 18 ಇವರುಗಳು ಸಹ ನನ್ನ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆ ಹೇಳಿಕೆಗಳನ್ನು ತನಿಖೆಗಾಗಿ ಸೃಷ್ಟಿಸಿದೆ ಎಂದರೆ ಸರಿಯಲ್ಲ. ನಿಪಿ-31 ಮತ್ತು 32 ಇವುಗಳನ್ನು ನನ್ನ ತನಿಖೆಗೆ ಪೂರಕವಾಗುವಂತೆ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಯಾವುದೇ ಸ್ಥಳವನ್ನಾಗಲೀ, ಸಾವಿನ ಬಗ್ಗೆ ಮಾಹಿತಿಯನ್ನಾಗಲೀ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ಕನ್ನಡ ಬರುವುದಿಲ್ಲ ಮತ್ತು ಅವರು ನನ್ನ ಮುಂದೆ ಕಬೂಲಾತಿ ಹೇಳಿಕೆ ನೀಡಿಲ್ಲ ಎಂದರೆ, ನಾನು ಅವರಿಗೆ ಬಲ್ಲವರಿಂದ ಹಿಂದಿಯಲ್ಲಿ ತಿಳಿಸಿದ್ದೆ. ನನಗೆ ತನಿಖೆಯನ್ನು ಮುಂದುವರೆಸಿಕೊಳ್ಳುವಂತೆ ಮೇಲಾಧಿಕಾರಿಗಳು ಯಾವುದೇ ಸೂಚನೆ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ಸಿಬ್ಬಂದಿಗಳು ಆರೋಪಿತರನ್ನು ನನ್ನ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯನ್ನು ಚಾಸಾ-13 ಮತ್ತು 14 ಇವರ ಸಮಕ್ಷಮ ದಸ್ತಗಿರಿ ಮಾಡಿ, ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ.

2) ನಿಪಿ-30 ಮತ್ತು 32 ಫೋಟೋಗಳನ್ನು ತನಿಖೆಗಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-31 ರ ಮಹಜರನ್ನು ಠಾಣೆಯಲ್ಲಿ ಬರೆದಿದೆ ಎಂದರೆ ಸರಿಯಲ್ಲ. ಚಾಸಾ-16 ಮತ್ತು 17 ಇವರ ಸಮಕ್ಷಮ ಯಾವುದೇ ಪಂಚನಾಮೆಯನ್ನು ಬರೆದಿಲ್ಲ ಎಂದರೆ ಸರಿಯಲ್ಲ. ಚಾಸಾ-23 ಇವರು ನನ್ನ ಕೋರಿಕೆಯ ಮೇರೆಗೆ ಒಂದು ತಪ್ಪು ಮಾಹಿತಿ ನೀಡಿದ್ದಾರೆ ಎಂದರೆ ಸರಿಯಲ್ಲ. ನಿಶಾನೆ ಪಿ-24, 25 ರ ನಕಾಶೆಗಳನ್ನು ನಮ್ಮ ಹೇಳಿಕೆಗಳ ಆಧಾರದಿಂದ ಆ ಜಾಗೆಗೆ ಹೋಗದೇ ಮಾಡಿಕೊಟ್ಟಿದ್ದಾರೆ ಎಂದರೆ

ಸರಿಯಲ್ಲ. ಆರೋಪಿತರ ಮನೆಯಲ್ಲಿ ನಾನು ಹೇಳಿದಂತಹ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ನಿಪಿ-34 ರ ವಿವರಗಳನ್ನು ನಾನೇ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಅದರಲ್ಲಿ ಆ ವಿವರಗಳನ್ನು ನನಗೆ ಒದಗಿಸಿದ ಸಂಸ್ಥೆಗಳ ಸೀಲು, ಸಹಿ ಇಲ್ಲ ಎಂದರೆ ಸರಿಯಲ್ಲ. ಮೃತ ವ್ಯಕ್ತಿಗೆ ಕುಡಿತದ ಚಟ ಇದ್ದು, ಅದರಿಂದಾಗಿ ಆತ ರಸ್ತೆ ಅಪಘಾತದಲ್ಲಿ ತೀರಿದ್ದ ಎಂದರೆ ಸರಿಯಲ್ಲ. ಈ ವಿಷಯ ನನಗೆ ತನಿಖೆಯಲ್ಲಿ ತಿಳಿದಿತ್ತು ಎಂದರೆ ಸರಿಯಲ್ಲ. ಆದರೂ ಆರೋಪಿತರಿಗೆ ತೊಂದರೆ ಮಾಡಲು ಬರೆದ ಒಂದು ತಪ್ಪು ತನಿಖಾ ವರದಿಗಾಗಿ ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ